


## ಎನ್-ಗೇಜ್

ಕಳೆದ ಜನವರಿಯಲ್ಲಿ ಆರಂಭವಾದ ಈ ಮೆಸೆಂಜರ್ ಆ್ಯಪ್ ಸದ್ಯ 8 ಲಕ್ಷಕ್ಕೂ ಅಧಿಕ ಬಳಕೆದಾರರನ್ನು ಹೊಂದಿದ್ದು, ಅತ್ಯಂತ ಭದ್ರತೆ ಹೊಂದಿರುವ ಹಾಗೂ ಖಾಸಗಿ ಮೆಸೆಂಜರ್ ಆ್ಯಪ್ ಆಗಿದೆ. ಸಂದೇಶಗಳನ್ನು ಕಳಿಸುವಾಗ ಹಾಗೂ ಪಡೆಯುವಾಗ ಅತ್ಯಂತ ಹೆಚ್ಚಿನ ಭದ್ರತೆ ನೀಡಲಾಗಿದ್ದು, ಇತರರ ಕೈಗೆ ಸಿಗದಂತೆ ಎಚ್ಚರಿಕೆ ವಹಿಸಲಾಗಿದೆ ಎನ್ನುತ್ತಾರೆ ಎನ್–ಗೇಜ್ ಸ್ಥಾಪಕ ಮತ್ತು ಸಿಇಒ ಅಜಿತ್ ಪಟೇಲ್.

ನಿಮ್ಮ ಮೊಬೈಲ್ ಸಾಧನ ಕಳೆದುಹೋದರೂ ಈ ಸಂದೇಶಗಳ ಮೇಲೆ ನಿಯಂತ್ರಣ ಸಾಧಿಸಿ ಬರ್ನ್ ಮೂಲಕ ಅಳಿಸಿ ಹಾಕಬಹುದು. ಸಂದೇಶಗಳನ್ನು ಬೇರೆ ಯಾರೂ ನಕಲು ಮಾಡುವುದಾಗಲಿ ಅಥವಾ ಸ್ಕ್ರೀನ್‌ಶಾಟ್ ತೆಗೆಯುವುದಾಗಲಿ ಮಾಡಲು ಸಾಧ್ಯವಿಲ್ಲ. ಆಕಸ್ಮಿಕವಾಗಿ ಕಳಿಸಿದ ಸಂದೇಶಗಳನ್ನು ಹಿಂದಕ್ಕೆ ಪಡೆಯಬಹುದು. ಬೇರೆಯವರು ಓದದಂತೆ ಇದು ಜಂಬಲ್ ಆಗುತ್ತದೆ. ವಿಶ್ವದ ವಿವಿಧ 45 ಭಾಷೆಗಳ ಮೂಲಕ ಸಂವಹನ ನಡೆಸಬಹುದು. ಈ ಆ್ಯಪ್ ಡೌನ್‌ಲೋಡ್ ಮಾಡುವ ಅಗತ್ಯವಿಲ್ಲದೇ ಸಾಮಾಜಿಕ ಜಾಲತಾಣದಲ್ಲಿ ಮತ್ತೊಬ್ಬರು ಹಂಚಿಕೊಳ್ಳಬಹುದು.

ಈಗ ಎನ್–ಗೇಜ್‌ನ ಬಳಕೆದಾರರಿಗೆ 250 ದಶಲಕ್ಷ ಷೇರುಗಳನ್ನು ವಿತರಿಸಲು ಮುಂದಾಗಿದೆ. ಭಾರತದಲ್ಲಿ 10 ಲಕ್ಷ ಬಳಕೆದಾರರಿಗೆ ತಲಾ 20 ಲಾಯಲ್ಟಿ ಪಾಯಿಂಟ್ ನೀಡಲಾಗುವುದು. ಇವುಗಳನ್ನು ಷೇರಿನ ಬದಲಾಗಿ ವಿನಿಮಯ ಮಾಡಿಕೊಳ್ಳಬಹುದು.




## ಸಿಗ್ನಲ್

ಐಫೋನ್‌ನ ಈ ಉಚಿತ ಆ್ಯಪ್‌ನಿಂದ ಎಂಡ್ ಟು ಎಂಡ್ ಬರಹಗಳನ್ನು ಕಳಿಸಬಹುದು. ಡೌನ್‌ಲೋಡ್ ಮಾಡಿಕೊಂಡ ನಂತರ ನಿಮ್ಮ ಫೋನ್ ನಂಬರ್ ಅನ್ನು ಬಳಸಿಕೊಂಡು ಇತರ ಸಿಗ್ನಲ್ ಬಳಕೆದಾರರನ್ನು ಆ್ಯಪ್ ಹುಡುಕುತ್ತದೆ. ಹೀಗಾಗಿ ನೀವು ಎಸ್‌ಎಂಎಸ್ ಮೂಲಕ ಬಂದ ಕೋಡ್ ಬಳಸಿಕೊಂಡು ನೋಂದಣಿ ಮಾಡಿಸಿಕೊಳ್ಳಬೇಕು. ಎರಡು ಸ್ಕ್ರೀನ್‌ಗಳಿದ್ದು ಒಂದು ಇನ್‌ಬಾಕ್ಸ್ ಮತ್ತು ಇನ್ನೊಂದು ಆರ್ಕೈವ್ ತೋರಿಸುತ್ತದೆ. ಆದರೆ ಚಾಟ್‌ನಲ್ಲಿ ಬಳಸಿದ ಫೋಟೊ ಅಥವಾ ವಿಡಿಯೋಗಳು ಭದ್ರತೆ ಕಾರಣದಿಂದ ನಿಮ್ಮ ಫೋನ್‌ನಲ್ಲಿ ಸಂಗ್ರಹವಾಗುವುದಿಲ್ಲ.




## ವಾಟ್ಸಾಪ್‌ನಲ್ಲಿ ಸ್ನ್ಯಾಪ್‌ಚಾಟ್‌ನ ಫೀಚರ್

ಸಾಮಾನ್ಯವಾದ ಸಂಭಾಷಣೆಯನ್ನು ಕ್ಯಾಮೆರಾ ಫೀಚರ್‌ಗಳ ಮೂಲಕ ಹೆಚ್ಚು ಆಕರ್ಷಕವನ್ನಾಗಿ ಮಾಡಲಾಗಿದೆ. ಫೋಟೊ ಹಾಗೂ ವಿಡಿಯೋಗಳ ಮೇಲೆ ಬರೆಯಬಹುದು, ಚಿತ್ರ ಬಿಡಿಸಬಹುದು ಅಥವಾ ಇಮೋಜಿ ಅಂಟಿಸಬಹುದು. ಇವುಗಳನ್ನು ನಿಮ್ಮ ಸಂಗ್ರಹದಿಂದಲೇ ಬಳಸಬಹುದು ಅಥವಾ ತಕ್ಷಣ ಚಿತ್ರ ತೆಗೆಯಬಹುದು. ಇದರಿಂದಾಗಿ ವಾಟ್ಸಾಪ್ ಮೆಸೆಂಜರ್ ಬಳಕೆದಾರರು ಇನ್ನೊಂದು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಗ್ರೂಪ್ ಮಾಡಿಕೊಂಡವರು ಯಾವುದೇ ಸಂದರ್ಭದಲ್ಲಿ ಲಿಂಕ್‌ಗಳನ್ನು ಕಡಿತಗೊಳಿಸಬಹುದು.

## ಪಿಕ್ಸ್‌ಆರ್ಟ್ ಫೋಟೊ ಸ್ಟುಡಿಯೊ




ಐಫೋನ್‌ನ ಈ ಆ್ಯಪ್ ಫೋಟೊ ಎಡಿಟಿಂಗ್‌ಗೆ ಬೇಕಾದ ಸಲಕರಣೆಗಳನ್ನು ಒಳಗೊಂಡಿದೆ. ಫೋಟೋದ ಗುಣಮಟ್ಟವನ್ನು ಹೆಚ್ಚಿಸಬಹುದು. ವಿವಿಧ ಬಗೆಯ ಡ್ರಾಯಿಂಗ್ ಸಲಕರಣೆಗಳಿರುವ ಈ ಆ್ಯಪ್ ಉತ್ತಮವಾದ ಫಿಲ್ಟರ್‌ಗಳನ್ನು ಹೊಂದಿದೆ. ಫೋಟೋಗಳಿಗೆ ಕಲಾತ್ಮಕ ರೂಪ ನೀಡಬಹುದಲ್ಲದೇ ಫೋಟೊ ಹಾಗೂ ಡ್ರಾಯಿಂಗ್‌ಗಳನ್ನು ರೀಮಿಕ್ಸ್ ಮಾಡುತ್ತದೆ. ಈ ಉಚಿತ ಆ್ಯಪ್‌ನಿಂದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಫೋಟೋಗಳನ್ನೂ ತೆಗೆದುಕೊಂಡು ನೇರವಾಗಿ ಅಲ್ಲಿಂದಲೇ ಎಡಿಟಿಂಗ್ ಶುರು ಮಾಡಬಹುದು. ಫೋನ್ ಪರದೆಯ ಮೇಲೆ ಚಿವುಟಿದರೆ ಫೋಟೊ ದೊಡ್ಡದಾಗಿ ಕಾಣಿಸಿಕೊಂಡು ಪ್ಲಸ್ ಬಟನ್‌ನಿಂದ ಹೆಚ್ಚುವರಿ ನಿಯಂತ್ರಣ ಗುಂಡಿಗಳನ್ನು ಬಳಸಬಹುದು.

■ ಎಸ್.ತುಂಬೆ